ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ, ಬೃಹತ್ ನೀರುಗಾಲುವೆ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560011


ಸಂಖ್ಯೆ: ಮುಅ/ಬೃ.ನೀ.ಗಾ/ಪಿಆರ್/1086/2023-24 ದಿನಾಂಕ: 15-09-2023

# ಸಾರ್ವಜನಿಕ ಪ್ರಕಟಣೆ

## (W.P No.38401/2014)

ಘನ ಉಚ್ಚ ನ್ಯಾಯಾಲಯವು WP No. 38401/2014 ದಾವೆಯಲ್ಲಿ ರಾಜಕಾಲುವೆಗಳ ಮೇಲೆ ಹೊಸದಾಗಿ ಒತ್ತುವರಿಗಳು ಇದ್ದಲ್ಲಿ ಅಂತಹ ಒತ್ತುವರಿಗಳನ್ನು ತುರ್ತಾಗಿ ಗುರುತಿಸಿ, ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಬೇಕಾಗಿದ್ದು, ಇದು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿದ್ದು, ಘನ ಸರ್ಕಾರದ ಆದೇಶ ಸಂಖ್ಯೆ:ನಅಇ 250 ಎಂಎನ್‌ವೈ 2018 (ಭಾಗ-3), ಬೆಂಗಳೂರು ದಿನಾಂಕ:28.08.2023 (1) ರಂತೆ ರಾಜಕಾಲುವೆಗಳ ಮೇಲೆ ಇರುವ ಒತ್ತುವರಿಗಳನ್ನು ಗುರುತಿಸಲು ಬಿಬಿಎಂಪಿ ವತಿಯಿಂದ ಕ್ರಮಕೈಗೊಳ್ಳಲಾಗುತ್ತಿರುತ್ತದೆ. ಅವುಗಳ ವಿವರ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ದೂರು ನೀಡುವ ಪ್ರಾಧಿಕಾರ (Complaining Authority) | ವಿಭಾಗ/ವಲಯ | Email ID | ದೂರವಾಣಿ ಸಂಖ್ಯೆ: |
|---|---|---|---|---|
| 1 | ಕಾರ್ಯಪಾಲಕ ಅಭಿಯಂತರರು | **ಪೂರ್ವ ವಲಯ**<br>**ವಿಧಾನಸಭಾ ಕ್ಷೇತ್ರಗಳು:**<br>ಶಿವಾಜಿನಗರ, ಶಾಂತಿನಗರ, ಪುಲಿಕೇಶಿನಗರ, ಸರ್ವಜ್ಞನಗರ, ಹೆಬ್ಬಾಳ ಮತ್ತು ಸಿ.ವಿ.ರಾಮನ್‌ನಗರ | eeswdeast@gmail.com | 9480683667 |
| 2 | ಕಾರ್ಯಪಾಲಕ ಅಭಿಯಂತರರು | **ಪಶ್ಚಿಮ ವಲಯ**<br>**ವಿಧಾನಸಭಾ ಕ್ಷೇತ್ರಗಳು:**<br>ರಾಜಾಜಿನಗರ, ಚಾಮರಾಜಪೇಟೆ, ಗೋವಿಂದರಾಜನಗರ, ಮಹಾಲಕ್ಷ್ಮೀ ಲೇಔಟ್, ಗಾಂಧಿನಗರ ಮತ್ತು ಮಲ್ಲೇಶ್ವರಂ | eewestzone@gmail.com | 9480685443 |
| 3 | ಕಾರ್ಯಪಾಲಕ ಅಭಿಯಂತರರು | **ದಕ್ಷಿಣ ವಲಯ**<br>**ವಿಧಾನಸಭಾ ಕ್ಷೇತ್ರಗಳು:**<br>ವಿಜಯನಗರ, ಪದ್ಮನಾಭನಗರ ಮತ್ತು ಬಸವನಗುಡಿ | eeswdsouth2019@gmail.com | 9964843326 |
| 4 | ಕಾರ್ಯಪಾಲಕ ಅಭಿಯಂತರರು | **ಕೋರಮಂಗಲ ಕಣಿವೆ**<br>**ವಿಧಾನಸಭಾ ಕ್ಷೇತ್ರಗಳು:**<br>**ಬಿಟಿಎಂ ಲೇಔಟ್, ಜಯನಗರ ಮತ್ತು ಚಿಕ್ಕಪೇಟೆ** | eeswdkvp@gmail.com | 9342019909 |
| 5 | ಕಾರ್ಯಪಾಲಕ ಅಭಿಯಂತರರು | **ಯಲಹಂಕ ವಲಯ**<br>**ವಿಧಾನಸಭಾ ಕ್ಷೇತ್ರಗಳು:**<br>ಬ್ಯಾಟರಾಯನಪುರ ಮತ್ತು ಯಲಹಂಕ | eeswdyelahanka@gmail.com | 8892939394 |

| ಕ್ರ ಸಂ | ದೂರು ನೀಡುವ ಪ್ರಾಧಿಕಾರ (Complaining Authority) | ವಿಭಾಗ/ವಲಯ | Email ID | ದೂರವಾಣಿ ಸಂಖ್ಯೆ: |
|---|---|---|---|---|
| 6 | ಕಾರ್ಯಪಾಲಕ ಅಭಿಯಂತರರು | **ಮಹದೇವಪುರ ವಲಯ**<br><br>**ವಿಧಾನಸಭಾ ಕ್ಷೇತ್ರಗಳು:**<br>ಕೆ.ಆರ್.ಪುರಂ ಮತ್ತು ಮಹದೇವಪುರ | eeswdmdp@gmail.com | 9480683015 |
| 7 | ಕಾರ್ಯಪಾಲಕ ಅಭಿಯಂತರರು | **ಬೊಮ್ಮನಹಳ್ಳಿ ವಲಯ**<br>**ವಿಧಾನಸಭಾ ಕ್ಷೇತ್ರಗಳು:**<br>ಬೆಂಗಳೂರು ದಕ್ಷಿಣ ಮತ್ತು ಬೊಮ್ಮನಹಳ್ಳಿ | eeswdbhbbmp2017@gmail.com | 9844254135 |
| 8 | ಕಾರ್ಯಪಾಲಕ ಅಭಿಯಂತರರು | **ರಾಜರಾಜೇಶ್ವರಿನಗರ ವಲಯ**<br><br>**ವಿಧಾನಸಭಾ ಕ್ಷೇತ್ರಗಳು:**<br>ಯಶವಂತಪುರ ಮತ್ತು ರಾಜರಾಜೇಶ್ವರಿನಗರ | swdrrnagara2018@gmail.com | 9448303753 |
| 9 | ಕಾರ್ಯಪಾಲಕ ಅಭಿಯಂತರರು | **ದಾಸರಹಳ್ಳಿ ವಲಯ**<br><br>**ವಿಧಾನಸಭಾ ಕ್ಷೇತ್ರ:**<br>ದಾಸರಹಳ್ಳಿ | eeswddhzbbmp@gmail.com | 9036888707 |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ಹಂತಗಳ ರಾಜಕಾಲುವೆಗಳಲ್ಲಿ ಒತ್ತುವರಿಗಳನ್ನು / ಅತಿಕ್ರಮಣಗಳನ್ನು ಗುರುತಿಸಲು ಸಾರ್ವಜನಿಕರು ಕೈಜೋಡಿಸಿದಲ್ಲಿ ಹೆಚ್ಚಿನ ಒತ್ತುವರಿಗಳನ್ನು ಗುರುತಿಸುವಲ್ಲಿ ಪಾಲಿಕೆಗೆ ಸಹಕಾರಿಯಾಗುತ್ತದೆ. ಸದರಿ ಒತ್ತುವರಿಗಳನ್ನು ತೆರವುಗೊಳಿಸಿಕೊಂಡು ರಾಜಕಾಲುವೆಗಳನ್ನು ನಿರ್ಮಾಣ ಮಾಡುವುದರಿಂದ ಮಳೆನೀರು ಸರಾಗವಾಗಿ ಹರಿದು ಮಳೆಗಾಲದಲ್ಲಿ ಉಂಟಾಗುವ ಪ್ರವಾಹ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ. ಆದುದರಿಂದ ತಾವು ವಾಸಿಸುತ್ತಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುವ ರಾಜಕಾಲುವೆಗಳ ಮೇಲೆ ಯಾವುದಾದರೂ ಒತ್ತುವರಿಗಳು ತಮ್ಮ ಗಮನಕ್ಕೆ ಬಂದಿದ್ದರೆ ಅಂತಹ ಒತ್ತುವರಿಗಳ ಮಾಹಿತಿಯನ್ನು ಭಾವಚಿತ್ರದೊಂದಿಗೆ ಮೇಲ್ಕಂಡಂತೆ ನಮೂದಿಸಿರುವ ಆಯಾ ವಿಭಾಗದ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರಿಗೆ ದಿನಾಂಕ: 20-09-2023 ರ ಅಪರಾಹ್ನ 2.00 ಗಂಟೆಯ ಒಳಗೆ ಸಲ್ಲಿಸಲು ಈ ಮೂಲಕ ಕೋರಿದೆ.

15/9/2023

ಪ್ರಧಾನ ಅಭಿಯಂತರರು
ಹಾಗೂ ಪದನಿಮಿತ್ತ ಮುಖ್ಯ ಅಭಿಯಂತರರು
ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತಕಾರ್ಯಾಲಯಕ್ಕೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಾರ್ವಜನಿಕ ಸಂಪರ್ಕ ಅಧಿಕಾರಿ ರವರು ಯಾವುದಾದರೂ ಎರಡು ಪ್ರಮುಖ ದಿನಪತ್ರಿಕೆಯಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲು ಕೋರಿದೆ.
5. ಕಛೇರಿ ಪ್ರತಿ